Form No.4 (Civil) Deposition Sheets (R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 56/2020

ಪ್ರಾ.ಸಾ. 10 ಚಾ.ಸಾ. 16

| | | |
|---|---|---|
| ಹೆಸರು | : | ಶ್ರೀನಾಥ |
| ತಂದೆಯ ಹೆಸರು | : | ಸಿತಪ್ಪ ಬಿ ಎನ್ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಸಹಾಯಕ ನಿರ್ದೇಶಕರು |
| ವಾಸ | : | ಬೆಳಗಾವಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: **04-02-2026**
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ದಿ: 06.03.2014 ರಿಂದ 31-08-2025 ವರೆಗೆ ನಾನು ಹಿರಿಯ ವೈಜ್ಞಾನಾಕ ಅಧಿಕಾರಿ ಎಫ್ಎಸ್ಎಲ್ ಬೆಂಗಳೂರು ಇಲ್ಲಿ ಕಾರ್ಯ ನಿರ್ವಹಿಸಿದ್ದೆನೆ.

2. ದಿ: 08.02.2019 ರಂದು ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡು ಒಂದು ವಸ್ತುವನು ಕೇಂದ್ರಿಯ ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರಿಗೆ ಸಲ್ಲಿಸಿದ್ದು ನಂತರ ಸದರಿ ವಸ್ತುವನ್ನು ದಿ: 03.10.2019 ರಿಂದ 15-10-2019 ವರೆಗೆ ನಾನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ವೆಜ್ಞಾನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದರಿ ವಸ್ತುವಿನ ಮೇಲೆ ಇದ್ದಂತ ಸೀಲುಗಳು ಸುಸ್ತಿತಿಯಲ್ಲಿದ್ದು, ಮಾದರಿ ಸೀಲಿಗೆ ಹೊಂದಾಣಿಕೆಯಾಗುತಿತ್ತು, ಸೀಲುಗಳನ್ನು ಬಿಚ್ಚಿ ನೋಡಲಾಗಿ, ವಸ್ತು ಸಂ: 1 ರಲ್ಲಿ ಬಟ್ಟೆಯಿಂದ ಸುತ್ತಿದ ಒಣ ಗಾಂಜಾ ಇತ್ತು. ಸದರಿ ವಸ್ತುವನ್ನು ನಾನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದರಿ ವಸ್ತು ಒಂದು ಒಣಗಿದ ಗಾಂಜಾದ ಹಸಿರು ಕಂದು ಬಣ್ಣದ ಎಲೆಗಳೂಂದಿಗೆ ಹೂವುಗಳು ಮತ್ತು ಬೀಜಗಳು ಇತ್ತು. ಸದರಿ ವಸ್ತುವಿನ ಮಾದರಿಯನ್ನು ತೂಕ ಮಾಡಿ ಅದನ್ನು ಸಂಪೂರ್ಣ ಪುಡಿ ಮಾಡಿ ಕ್ಲೋರೊಫಾರಮ / ಪೆಟ್ರೋಲಿಯಂ ಇತರ / ಮೆತನಾಲ ಗಳನ್ನು ತೆಗೆದು ಶುದ್ದಿಕರಿಸಲಾಯಿತು. ಸದರಿವಸ್ತು ವಿನ ತೂಕ ಬಟ್ಟೆಯೊಂದಿಗಿ 194. ಗ್ರಾಂ ಇದ್ದು 9 ಗ್ರಾಂ

ನಷ್ಟು ಮಾದರಿಯನ್ನು ಪರಿಶೀಲನೆಗೆ ಬಳಕೆ ಮಾಡಿದ್ದು, 185.5 ಗ್ರಾಂ ನಷ್ಟು ಮಾದರಿ ಮತ್ತು ಬಟ್ಟೆಯನ್ನು ಹಿಂದಿರುಗಿಸಲಾಯಿತು.

3. ನನ್ನ ವರದಿಯಲ್ಲಿ ನಮೂದಿಸಿದ ರೀತಿಯ 5 ವೈಜ್ಞಾನಿಕ ಪರೀಶಿಲನೆಗಳನ್ನು ಮಾದರಿ ಸಂಗ್ರಿಹಿಸಿದ ಒಣ ಗಾಂಜಾದ ಮೇಲೆ ಮಾಡಲಾಗಿದ್ದು ನನ್ನ ಅಭಿಪ್ರಾಯದಲ್ಲಿ ಸದರಿ ವಸ್ತುವಿನಲ್ಲಿ ಕೆನಾಬಿಸ್ ( ಗಾಂಜಾ) ಕಂಡು ಬಂದಿದ್ದು ಅದರಲ್ಲಿ ಸೈಕೋ ಆವಕ್ಟಿವ ಅಂಶಗಳು ಇರುತ್ತದೆ ಎಂದು ಆಗಿರುತ್ತದೆ. ಅದರಂತೆ ನನ್ನ ಅಭಪ್ರಯ ವರದಿಯನ್ನು ಮಾದರಿ ಮೊಹರಿನೊಂದಿಗೆ ನೀಡಿರುತ್ತೆನೆ. ನಿಪಿ 14 ಮತ್ತು 15 ಗಳನ್ನು ತೊರಿಸಿ ತಮ್ಮ ಸಹಿ ಗುರುತಿಸಿ ಅವುಗಳನ್ನು ನಿಪಿ-14(ಬಿ) ಮತ್ತು ನಿಪಿ 15(ಬಿ) ಎಂದು ಗುರುತಿಸಲಾಂಯಿತು. ಸಾಕ್ಷಿಗೆ ಮುಮಾ-1 ತೋರಿಸಲಾಗಿ ಗುರುತಿಸಿದ್ದಾರೆ.

## <u>ಪಾಟೀ ಸವಾಲು ಆರೋಪಿತರ ಪರ ಶ್ರೀ.ಡಿ ವಿ ವಕೀಲರಿಂದಃ</u>

4. ನಾನು ದಿನಾಂಕ ಮತ್ತು ಸಮಯವನ್ನು ನನ್ನ ಅಭಪ್ರಯದ ಭಾಗದಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾವು 8 ತಿಂಗಳ ನಂತರ ಪರಿಕ್ಷಿಸಿ ವರದಿ ನೀಡಿರುತ್ತೆವೆ ಎಂದರೆ ಸರಿ. ನಾನು ಪರಿಕ್ಷಿಸಿದ ವಸ್ತು ತನಿಖಾಧಿಕಾರಿಯ ಅಥವಾ ಇನ್ವೆಂಟರಿ ಸ್ಯಾಂಪಲ್ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಅದನ್ನು ತನಿಖಾಧಿಕಾರಿ ಕಳುಹಿಸಿದ್ದು ಅವರೆ ಜಪ್ತಿ ಪಡಿಸಿಕೋಂಡ ಮಾದರಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಗೃಹ ಇಲಾಖೆಯ ಅಡಿಯಲ್ಲಿ ಕೆಲಸ ಮಾಡುತ್ತೆನೆಂದರೆ ಸರಿ. ನಾನು ಪೊಲಿಸರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ.

5. ದಿಃ 08.02.2019 ರಂದು ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡು ಒಂದು ವಸ್ತುವನು ಕೇಂದ್ರಿಯ ವಿಧಿ ವಿಜ್ಞಾನ ಪ್ರಯೋಗಾಲಯ ಬೆಂಗಳೂರಿಗೆ ಸಲ್ಲಿಸಿದ್ದು ನಂತರ ಸದರಿ ವಸ್ತುವನ್ನು ದಿಃ 03.10.2019 ರಿಂದ 15-10-2019 ವರೆಗೆ ನಾನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ವೆಜ್ಞಾನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದರಿ ವಸ್ತುವಿನ ಮೇಲೆ ಇದ್ದಂತ ಸೀಲುಗಳು ಸುಸ್ತಿತಿಯಲ್ಲಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾದರಿ ಸೀಲಿಗೆ ಹೊಂದಾಣಿಕೆಯಾಗುತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೀಲುಗಳನ್ನು ಬಿಚ್ಚಿ ನೋಡಲಾಗಿ, ವಸ್ತು ಸಂಃ 1 ರಲ್ಲಿ ಬಟ್ಟೆಯಿಂದ ಸುತ್ತಿದ ಒಣ ಗಾಂಜಾ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಸ್ತುವನ್ನು ನಾನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ವಸ್ತು ಒಂದು ಒಣಗಿದ ಗಾಂಜಾದ ಹಸಿರು ಕಂದು ಬಣ್ಣದ ಎಲೆಗಳೊಂದಿಗೆ ಹೂವುಗಳು ಮತ್ತು ಬೀಜಗಳು ಇತ್ತು. ಸದರಿ ವಸ್ತುವಿನ ಮಾದರಿಯನ್ನು ತೂಕ ಮಾಡಿ ಅದನ್ನು ಸಂಪೂರ್ಣ ಪುಡಿ ಮಾಡಿ ಕ್ಲೋರೊಫಾರಮ / ಪೆಟ್ರೋಲಿಯಂ ಇತರ / ಮೆತನಾಲ ಗಳನ್ನು ತೆಗೆದು ಶುದ್ದಿಕರಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿವಸ್ತು ವಿನ ತೂಕ ಬಟ್ಟೆಯೊಂದಿಗಿ 194. ಗ್ರಾಂ ಇದ್ದು 9 ಗ್ರಾಂ ನಷ್ಟು ಮಾದರಿಯನ್ನು ಪರಿಶೀಲನೆಗೆ ಬಳಕೆ ಮಾಡಿದ್ದು, 185.5 ಗ್ರಾಂ ನಷ್ಟು ಮಾದರಿ ಮತ್ತು ಬಟ್ಟೆಯನ್ನು ಹಿಂದಿರುಗಿಸಲಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ವರದಿಯಲ್ಲಿ ನಮೂದಿಸಿದ ರೀತಿಯ 5 ವೈಜ್ಞಾನಿಕ ಪರೀಶಿಲನೆಗಳನ್ನು ಮಾದರಿ ಸಂಗ್ರಿಹಿಸಿದ ಒಣ ಗಾಂಜಾದ ಮೇಲೆ ಮಾಡಲಾಗಿದ್ದು ನನ್ನ ಅಭಿಪ್ರಾಯದಲ್ಲಿ ಸದರಿ ವಸ್ತುವಿನಲ್ಲಿ ಕೆನಾಬಿಸ್ ( ಗಾಂಜಾ) ಕಂಡು ಬಂದಿದ್ದು ಅದರಲ್ಲಿ ಸೈಕೋ ಆವಕ್ಟಿವ ಅಂಶಗಳು ಇರುತ್ತದೆ ಎಂದು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನನ್ನ ಅಭಿಪ್ರಾಯ ವರದಿಯನ್ನು ಮಾದರಿ ಮೊಹರಿನೊಂದಿಗೆ ನೀಡಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ